O.S. No- 118/2021

DW-1

ದಿನಾಂಕಃ 06.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ. ಆರ್.ಎಚ್.ಕೆ. ಪ್ರತಿವಾದಿ ಪರ ವಕೀಲರಿಂದ–**

ನಾನು ಈ ದಿನ ನನ್ನ ಪ್ರಮಾಣಿಕೃತ ಸಾಕ್ಷಿಯ ಬದಾಲಾಗಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ನನ್ನ ಮಾಹಿತಿಯ ಮೇರೆಗೆ ನಿಜವಾಗಿರುತ್ತವೆ ಅದನ್ನು ನನ್ನ ಸಾಕ್ಷಿಕೃತ ಹೇಳಿಕೆಯಂತೆ ಪರಿಗಣಿಸಬೇಕಾಗಿ ವಿನಂತಿ ಇದೆ.

1. ಒಂದು ಸರ್ವೇ ಮಾಪನ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

3 ನೇ ಪ್ರತಿವಾದಿಯನ್ನು ಪ್ರ.ಸಾ.-1 ಎಂದು ಪರಿಗಣಿಸಲಾಯಿತು.

**ಪಾಟಿ ಸವಾಲುಃ ಶ್ರೀ. ಡಿ.ಎಮ್.ಜೆ. ವಾದಿ ಪರ ವಕೀಲರಿಂದಃ** ದಾವೆಯನ್ನು ಯಾವ ವಸ್ತುವಿಷಯದ ಮೇಲೆ ಮಾಡಿದ್ದಾರೆ ಎಂದು ಗೊತ್ತಿದೆ. ನಾನು ದಾವಾ ಆಸ್ತಿಯನ್ನು ಸರ್ವೇ ನಂ. 3377/2 ಅ ಆಸ್ತಿಯನ್ನು ಮನ್ನೂರ ಇವರ ಕಡೆಯಿಂದ ನನ್ನ ಅಣ್ಣ ದಿನಾಂಕಃ 05.07.2019 ರಂದು ಖರೀದಿಸಿದ್ದರು. ನನ್ನ ಅಣ್ಣ ಅದನ್ನು ನನಗೆ ಗಿಫ್ಟ ಮಾಡಿದರು. ನನ್ನ ಅಣ್ಣ ಸದರಿ ಆಸ್ತಿಯನ್ನು ಖರೀದಿಸುವಾಗ ಮನೆಯ ಸ್ಥಿತಿಗತಿಯನ್ನು ತಿಳಿದುಕೊಂಡು ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಸಂಬಂಧವಾಗಿ ಮನ್ನೂರು ಹಾಗೂ ವಾದಿಯ ನಡುವೆ ತೀರ್ಪುಗಳಾಗಿವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ತೀರ್ಪುಗಳು ಆದ ಬಗ್ಗೆ ನನಗೆ ಮಾಹಿತಿ ಇಲ್ಲ. ಅಸಲು ದಾವಾ ಸಂಖ್ಯೆ 9/2003 ರ ದಾವೆ ಸದರಿ ನ್ಯಾಯಾಲಯದಲ್ಲಿ ಮನ್ನೂರ ಇವರು ಜೋಶಿ ಇವರ ವಿರುದ್ಧ ದಾವೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಎ, ಬಿ, ಸಿ, ಡಿ ಆಸ್ತಿಯು ಜೋಶಿ ಅವರದು ಹಾಗೂ ಎ, ಬಿ, ಸಿ, ಇ, ಎಫ್, ಜಿ, ಎಚ್ ಹಾಗೂ ಐ ಆಸ್ತಿಯು ತೋರಿಸಿದ ಕ್ಷೇತ್ರ ಇದು ನನಗೆ ಸೇರಿದ್ದು ಎಂದರೆ ಸರಿ.

ವಾದಿಯ ಆಸ್ತಿ ನಂ.3377/1 ಇದೆ ಎಂದರೆ ಸರಿ. ದಾವಾ ಬಿ, ಸಿ ವಾಲ್ ಸಮಾಯಕ ಗೋಡೆ ಎಂದರೆ ಸರಿ. ನಮ್ಮ ಮನೆಯು ಉತ್ತರಕ್ಕೆ ಇರುವ ದಾವಾ ಎ, ಬಿ, ಗೋಡೆ ಸಮಾಯಕ ಗೋಡೆ ಎಂದರೆ ಸರಿ. ಸಾಕ್ಷಿಗೆ ಕೆಲವು ಫೋಟೋಗಳಲ್ಲಿ ಎ, ಬಿ. ಗೋಡೆಗೆ ಹೊಂದಿಕೊಂಡು ಮೆಟ್ಟಿಲು ಇದೆ ಎಂದರೆ ಸಾಕ್ಷಿಯು ಮೆಟ್ಟಿಲುಗಳು ಇವೆ ಎಂದು ನುಡಿಯುತ್ತಾರೆ. ಫೋಟೋದಲ್ಲಿ ತೋರಿಸಿದ ಎ, ಬಿ ಮೆಟ್ಟಿಲುಗಳ ಮೇಲೆ ವಾದಿಯರಿಗೆ ಸಂಬಂಧಿಸಿದ ರೂಮುಗಳು ಇವೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಎ, ಬಿ ಗೋಡೆಗೆ ಹೊಂದಿಕೊಂಡಿರುವ ಮೆಟ್ಟಿಲುಗಳನ್ನು ಹೊಡೆದು ಹಾಕಬಾರದು ಎಂದು ಮಾನ್ಯ ನ್ಯಾಯಾಲಯ ಆದೇಶ ನೀಡಿತ್ತು ಎಂದರೆ ಗೊತ್ತಿಲ್ಲ. ವಾದಿಯು ನನ್ನ ಜಾಗದಲ್ಲಿ ಅತಿಕ್ರಮಣ

ಮಾಡಿಲ್ಲ ಎಂದು ಫಾಸ್ಟ ಟ್ರ್ಯಾಕ್ ನ್ಯಾಯಾಲಯ, ಜಮಖಂಡಿ ಆರ್.ಎ. 1/2007 ರಲ್ಲಿ ಆದೇಶ ನೀಡಿದ್ದರು ಎಂದರೆ ಗೊತ್ತಿಲ್ಲ.

ಈ ನ್ಯಾಯಾಲಯ ಆದೇಶ ನೀಡಿದ ಮೇಲೆ ಅರ್ಧ ಮೆಟ್ಟಿಲುಗಳನ್ನು ತೆಗೆಸಿದ್ದೇನೆ ಎಂದರೆ ಸರಿ. ನನ್ನ ಮನೆಯ ಉತ್ತರಕ್ಕೆ ವಾದಿಯ ಎ, ಬಿ ಸಮಾಯಕ ಗೋಡೆ ಇದೆ. ಅದೇ ರೀತಿ ಬಿ, ಸಿ ಸಮಾಯಕ ಗೋಡೆ ನನ್ನ ಮನೆಯ ಪಶ್ಚಿಮಕ್ಕೆ ಬರುತ್ತದೆ ಎಂದರೆ ಸರಿ. ಎರಡೂ ಬಿ,ಸಿ ಸಮಾಯಕ ಗೋಡೆಗಳು ತೆರೆದಿವೆ ಎಂದರೆ ಸರಿ. ಆದ್ದರಿಂದ ಮಳೆಗಾಲದಲ್ಲಿ ನೀರು ಗೋಡೆಯ ಮೇಲೆ ಬಿಳುತ್ತದೆ ಎಂದರೆ ಸರಿ. ಅದೇ ರೀತಿ ಬಿ, ಸಿ ಗೋಡೆಗೆ ಮಳೆಗಾಲದಲ್ಲಿ ನೀರು ಬಡಿಯುತ್ತದೆ ಎಂದರೆ ಸರಿ. ನೀರು ತಾಗಿ ಸದರಿ ಎರಡೂ  ಸಮಾಯಕ ಗೋಡೆಗಳು ಸಡಿಲಾಗಿವೆ ಎಂದರೆ ಗೊತ್ತಿಲ್ಲ. ನೀರು ತಾಗಿ ಎರಡೂ ಸಮಾಯಕ ಗೋಡೆಗಳು ಉಬ್ಬಿದೆ ಎಂದರೆ ಗೊತ್ತಿಲ್ಲ. ಇದರಿಂದಾಗಿ ಎರಡೂ ಗೋಡೆಗಳು ಶಿಥಿಲವಾಗಿ ಕಟ್ಟಡ ಬಿಳುವ ಸ್ಥಿತಿಯಲ್ಲಿದೆ ಎಂದರೆ ಗೊತ್ತಿಲ್ಲ. ವಾದಿ ಸದರಿ ಗೋಡೆಗಳನ್ನು ದುರಸ್ತಿ ಮಾಡುವಂತೆ ನನ್ನ ಕೇಳಿಕೊಂಡರು ಎಂದರೆ ಸರಿಯಲ್ಲ.

ದಿನಾಂಕಃ 19.07.2021 ರಂದು ವಾದಿಯರು ವಕೀಲರ ಮೂಲಕ ನನಗೆ ಹಾಗೂ ಮೂಲ ಮಾಲೀಕರಿಗೆ ಸದರಿ ಗೋಡೆಗಳನ್ನು ದುರಸ್ತಿ ಮಾಡುವಂತೆ ನೋಟೀಸು ನೀಡಿದ್ದರು ಎಂದರೆ ಸರಿ. ಸದರಿ ನೋಟಿಸಿಗೆ ನಾನು ಪ್ರತ್ಯುತ್ತರ ನೀಡಿದ್ದೇನೆ. ಏನು ಉತ್ತರ ನೀಡಿದ್ದೆ ನೆನಪಿಲ್ಲ. ನಮ್ಮ ಮನೆಯ ಕಡೆ ಇರುವ ಎರಡೂ ಸಮಾಯಕ ಗೋಡೆಗಳನ್ನು ವಾದಿ ದುರಸ್ತಿ ಮಾಡಿದರೆ ನನಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದರೆ ಸರಿ. ಎರಡೂ ಸಮಾಯಕ ಗೋಡೆಗಳನ್ನು ದುರಸ್ತಿ ಮಾಡಲು ಒಂದು ದಿವಸ ಆಗಬಹುದು ಎಂದರೆ ಸಾಕ್ಷಿಯೂ ಈಗಾಗಲೇ ಕಟ್ಟಡ ಕೆಲಸ ನಡೆದಿದೆ ಎಂದು ನುಡಿಯುತ್ತಾರೆ. ನನ್ನ ಕಟ್ಟಡ ಪೂರ್ಣಗೊಂಡ ನಂತರ ಮಾಡಬಹುದು. ನಾನು ವಾದಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ದುರಸ್ತಿಯನ್ನು ಮುಂದೂಡುತ್ತ ಬಂದಿದ್ದೇನೆ ಎಂದರೆ ಸರಿಯಲ್ಲ. ಬಿ, ಸಿ ಗೋಡೆಗಳ ಮೇಲೆ ವಾದಿಯರ ಎರಡು ಕಿಟಕಿಗಳು ಇವೆ ಎಂದರೆ ಸರಿ. ಈ ಕಿಟಕಿಗಳ ಮೂಲಕ ವಾದಿಯರಿಗೆ ಗಾಳಿ ಬೆಳಕು ಚೆನ್ನಾಗಿ ಬರುತ್ತದೆ ಎಂದರೆ ಸರಿ. ಇದಕ್ಕೆ ತೊಂದರೆ ಕೊಡು ಉದ್ದೇಶದಿಂದ ನಾನು ನನ್ನ ಕಟ್ಟಡ ನಿರ್ಮಾಣ ಮಾಡುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಗೆ ಫೋಟೋಗಳನ್ನು ತೋರಿಸಲಾಗಿ ಅವುಗಳು ದಾವಾ ಆಸ್ತಿಗೆ ಸಂಬಂಧಿಸಿದ ಫೋಟೋಗಳು ಎಂದರೆ ಒಪ್ಪಿಕೊಂಡಿರುತ್ತಾರೆ. ಸದರಿ 5 ಫೋಟೋಗಳನ್ನು ಭಾ.ಸಾ.ಅಧಿನಿಯಮ 63(4) ರ ಪ್ರಮಾಣ ಪತ್ರವನ್ನು ಹಾಜರುಪಡಿಸುವ ಷರತ್ತಿನೊಂದಿಗೆ ಅವುಗಳನ್ನು ನಿಪಿ-13 ರಿಂದ ನಿಪಿ-17 ಎಂದು ಗುರುತಿಸಲಾಯಿತು. ಎರಡೂ ಸಮಾಯಕ ಗೋಡೆಗಳನ್ನು ದುರಸ್ತಿ ಮಾಡಲು ವಾದಿ ಸ್ವತಃ ಖರ್ಚು ಕೊಡಲು ಸಿದ್ದರಿದ್ದಾರೆ ಎಂದರೆ ಸಾಕ್ಷಿ ಅವರು ಏಕೆ ನನಗೆ ಕೊಡುಬೇಕು ಎಂದು ನುಡಿಯುತ್ತಾರೆ. ವಾದಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

Sd/-

ಹೆಚ್ಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು ಜಮಖಂಡಿ.